**ಕರ್ನಾಟಕ ಸರ್ಕಾರ**
**(ಸಿ.ಆರ್.ಪಿ.67)**

**ಹೇಳಿಕೆ ಹಾಳೆ**
**(ಆರ್.ಪಿ.ಸಂಖ್ಯೆ 57)**
**ನಮೂನೆ ಸಂಖ್ಯೆ 4**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 92/2011**

**ಫಿರ್ಯಾದಿ ಸಾ- 58 ಚಾಸಾ- 73**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಮಂಜೇಗೌಡ |
| ತಂದೆಯ ಹೆಸರುಃ | : | ಮಳಲಿಗೌಡ |
| ವಯಸ್ಸುಃ | : | 68 ವರ್ಷ |
| ಉದ್ಯೋಗಃ | : | ವ್ಯವಸಾಯ |
| ವಾಸ | : | ಬಿಂಡೇನಹಳ್ಳಿ, ಚನ್ನರಾಯಪಟ್ಟಣ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 11-07-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಕಳೆದ ವ್ಯವಸಾಯ ಮಾಡುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯವಿದೆ. ಆರೋಪಿತರು ಏನು ಕೆಲಸ ಮಾಡುತ್ತಿದ್ದರೆಂದು ನನಗೆ ಗೊತ್ತಿಲ್ಲ. ನಾನು ಚನ್ನರಾಯಪಟ್ಟಣದ ಆರ್ ಎಂ ಸಿ ಯಾರ್ಡ್‌ನಲ್ಲಿ ಅರವಿಂದ ಟ್ರೇಡರ್ಸ್‌ನ್ನು 30 ವರ್ಷಗಳಿಂದ ನಡೆಸುತ್ತಿದ್ದೇನೆ. ಅಲ್ಲಿ ಕೊಬ್ಬರಿ ವ್ಯಾಪಾರ ಮಾಡುತ್ತಿದ್ದೆನು. ಆರೋಪಿತರ ಜೊತೆ ನನಗೆ ಯಾವುದೇ ಹಣದ ವ್ಯವಹಾರ ಇರಲಿಲ್ಲ. ನಾನು ಆರೋಪಿತರಿಂದ ಜೂನ್ 2008ರಲ್ಲಿ ಯಾವುದೇ ಹಣವನ್ನು ಪಡೆದುಕೊಂಡಿಲ್ಲ. ಆರೋಪಿತರಿಂದ ನಾನು ಹಣವನ್ನು ಪಡೆದುಕೊಳ್ಳುತ್ತಿದ್ದೆನು ಮತ್ತು ಜೂನ್ 2008 ರಲ್ಲಿ ಅವರಿಂದ 1 ಲಕ್ಷ ರೂ ಸಾಲ ಪಡೆದಿದ್ದೆನು ಅದನ್ನು ಅವರು ಚೆಕ್ ಮೂಲಕ ಕೊಟ್ಟಿದ್ದರು, ಆ ಹಣವನ್ನು ನಾನು ಜುಲೈ 2008ರಲ್ಲಿ ಮರುಪಾವತಿಸಿರುತ್ತೇನೆ ಎಂದು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ವಿಶೇಷ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ದಾಖಲೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ವಿಶೇಷ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ನನ್ನ ಕೊಬ್ಬರಿ ವ್ಯಾಪಾರಕ್ಕೆ ಸಂಬಂಧಿಸಿದಂತೆ ಆರೋಪಿತರಿಂದ 12-6-2008ರಂದು 1 ಲಕ್ಷ ರೂವನ್ನು ಸಾಲವಾಗಿ ಪೆಡದುಕೊಂಡಿದ್ದೆನು ಅದನ್ನು ಅವ ರು ನನಗೆ ಚೆಕ್ ಮೂಲಕ ನೀಡಿದ್ದರು ಎಂದರೆ ಸರಿಯಲ್ಲ. ಆ ಹಣವನ್ನು ನಾನು 25-6-2008ರಲ್ಲಿ 1ಲಕ್ಷ ರೂಪಾಯಿ ಮತ್ತು 9-7-2008ರಲ್ಲಿ 25ಸಾವಿರ ರೂಪಾಯಿ ಒಟ್ಟು 1,25,000ರೂಪಾಯಿ ಕೊಟ್ಟು ತೀರಿಸಿರುತ್ತೇನೆ ಎಂರದೆ ಸರಿಯಲ್ಲ. ನನಗೆ ಆಗಾಗ್ಗೆ ಆರೋಪಿತರ ಜೊತೆ ಸಾಲದ ವ್ಯವಹಾರ ಇತ್ತು ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಸದರಿ ಹೇಳಿಕೆಯ ಭಾಗವನ್ನು ನಿಪಿ-98 ಎಂದು ಗುರುತಿಸಲಾಯಿತು. ಆರೋಪಿತರಿಂದ ಸಾಲ ಪಡೆದಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿದಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಬಿ ಜೆ ಪಿ ಎಸ್ ವಕೀಲರಿಂದಃ**

ಆರೋಪಿತರಿಗೆ ಗದ್ದೆ, ತೋಟ ಇತ್ತು ಎಂದರೆ ಸಾಕ್ಷಿಯು ನನ್ನ ಜಮೀನಿನ ಪಕ್ಕದಲ್ಲಿಯೇ ಇತ್ತು ಎನ್ನುತ್ತಾರೆ. ಅವರು ನನ್ನ ಅಂಗಡಿಗೆ ಬಂದು ಕೊಬ್ಬರಿ ವ್ಯಾಪಾರ ನಡೆಸುತ್ತಿದ್ದರು ಎಂದರೆ ಸರಿ. ಬಾಲಸುಬ್ರಹ್ಮಣ್ಯಗೌಡ ಆರೋಪಿತರ ಭಾವ ಎಂದರೆ ನಿಜ. ನಾನು ಧನಲಕ್ಷ್ಮೀ ಫೈನಾನ್ಸ್ ನಲ್ಲಿ ಚೀಟಿ ಹಾಕಿದ್ದೆನು ಎನ್ನುವುದು ನಿಜ. ಅವರ ಕೊಲೆಯಾದ ನಂತರ ನಾನು ಅವರ ಹೆಂಡತಿಯ ಬಳಿ 1ಲಕ್ಷ ರೂಪಾಯಿ ಸಾಲ ಪಡೆದಿದ್ದೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**